ಏನೂ ಆಗಲ್ಲ ಧೈರ್ಯವಾಗಿರು. ನಿನ್ನ ಮಕ್ಕಳದ್ದು ಆಕಸ್ಮಿಕ ಸಾವು ಅಂತ ನಾನು ಹೇಳಿದರೂ ಅವನ ಭಯ ಕಡಿಮೆ ಆಗ್ತಿಲ್ಲ... ನನ್ನ ಮಾತು ಉಪೇಕ್ಷೆ ಮಾಡಬೇಡಿ ಅಂತ ಜೋತಿಷಿ ಹೇಳಿದ್ದಾನಂತೆ! ಮೊದಲು ನಿಮ್ಮ ಕುಟುಂಬದ ಮೇಲೆ ಕೆಟ್ಟ ಪರಿಣಾಮ ಆಗ್ತವೆ. ಆಮೇಲೆ ನಿಮ್ಮ ತಮ್ಮಂದಿರ ಸರದಿ. ಕೆಟ್ಟದ್ದು ಆಗ್ತ ಹೋಗುತ್ತೆ. ಮೊದಲು ಪ್ರಾಯಶ್ಚಿತ್ತ ಮಾಡಿಕೊಳ್ಳಿ. ಪಿತೃಗಳನ್ನು ಆವಾಹನೆ ಮಾಡಿಸಿ ನಮ್ಮಿಂದ ತಪ್ಪಾಗಿದೆ, ಕ್ಷಮಿಸಿ ಎಂದು ಹೇಳಿಕೊಂಡರೆ ಮುಂದೆ ಆಗೋ ಅನಾಹುತಗಳು ತಪ್ಪಬಹುದು ಅಂತ ಹೇಳಿದ್ದಾನಂತೆ. ಈ ಶಾಪ, ಪ್ರಾಯಶ್ಚಿತ್ತ, ಪಶ್ಚಾತ್ತಾಪಗಳಲ್ಲಿ ನಂಗೆ ನಂಬಿಕೆ ಇಲ್ಲ. ಎಷ್ಟೋ ವರ್ಷಗಳ ಹಿಂದೆ ಸತ್ತಿರೋರನ್ನು ಆವಾಹನೆ ಮಾಡಿಕೊಳ್ಳೋದು ಹೇಗೆ? ಅವರೇನು ದೇವತೆಗಳೇ? ಮಂತ್ರಗಳ ಜತೆಗೆ ಪಿತೃಗಳ ಹೆಸರುಗಳನ್ನು ಹೇಳೋದಂತೆ. ಆವಾಹನೆ ಆಗಿದ್ದಾರೆ ಅಂದುಕೊಂಡು ಕ್ಷಮೆ ಕೇಳಿ ಇಪ್ಪತ್ತೊಂದು ಸಲ ನಮಸ್ಕಾರ ಮಾಡಬೇಕಂತೆ!.'

'ನೀವು ಕುಲದೇವರನ್ನು ಮರೆತಿದ್ದೀರಿ, ಅದಕ್ಕೆ ಹೀಗಾಗಿದೆ. ಮನೆ ಮಂದಿಯೆಲ್ಲ ಒಟ್ಟಿಗೆ ಕುಲದೇವರಿಗೆ ಹೋಗಿ ಹರಕೆ ಸಲ್ಲಿಸಿ ಬನ್ನಿ...' ಅಂತ ಇನ್ಯಾರೋ

